**O.S. 65-24** **PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 13.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ P S N, ವಕೀಲರಿಂದಃ**

4. 1974 ರಲ್ಲಿ ರಾಜಿಯಾದ ನಂತರ ನಮ್ಮ ಒಟ್ಟು ಕುಟುಂಬದ ಅಸ್ತಿತ್ವ ಕಳೆದುಹೋಯಿತು ಅಂದರೆ ಸರಿಯಲ್ಲ. ನನ್ನ ಪ್ರಕಾರ ಇನ್ನು ಕೂಡಾ ಏಕತ್ರ ಘರಾಣೇಯಲ್ಲಿ ಇದ್ದೀರಾ ಎಂಬ

ಪ್ರಶ್ನೆಗೆ ಃ

ಉತ್ತರಃ ಸಾಕ್ಷಿ ಇಲ್ಲವೆಂದು ಹೇಳುತ್ತಾರೆ.

5. 1974 ರಲ್ಲಿ ರಾಜಿ ಡಿಕ್ರಿ ಪ್ರಕಾರ ದಾವಾ ಆಸ್ತಿಯನ್ನು ತಂದೆ-ತಾಯಿ ಗೆ ತೆಗೆದಿದ್ದೆವು. ರಾಜಿ ಡಿಕ್ರಿಯಲ್ಲಿ ಇದರ ಬಗ್ಗೆ ನಮೂದು ಇಲ್ಲ. ದಾವಾ ಆಸ್ತಿಯನ್ನು ರಾಜಿ ಡಿಕ್ರಿ ಪ್ರಕಾರ ತಂದೆ-ತಾಯಿಗೆ ಕೊಟ್ಟಿದ್ದೇವೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ರಾಜಿ ಡಿಕ್ರಿ ಪ್ರಕಾರ ತಂದೆ-ತಾಯಿಗೆ ಕೊಟ್ಟಿದ್ದೇವೆ ಅಂತಾ ವಾದ ಪತ್ರ ಹಾಗೂ ಮುಖ್ಯ ವಿಚಾರಣೆ ತಯಾರು ಮಾಡುವಾಗ ನಮ್ಮ ವಕೀಲರಿಗೆ ಮಾಹಿತಿ ನೀಡಿದ್ದೇನೆ. ರಾಜಿ ಡಿಕ್ರಿಯಲ್ಲಿ ನಾನು ನಮ್ಮ ತಾಯಿ ನೋಡಿಕೊಳ್ಳಬೇಕು, ನಮ್ಮ ತಮ್ಮ ತಂದೆ ನೋಡಿಕೊಳ್ಳಬೇಕೆಂದು ಒಪ್ಪಿಕೊಂಡಿದ್ದೆವು ಅಂದರೆ ಸರಿಯಲ್ಲ. ನಮ್ಮ ತಂದೆ ಹಾಗೂ ತಾಯಿಗೆ ಕಲಘಟಗಿ ತಾಲ್ಲೂಕಿನ ಆಸ್ತಿಯನ್ನು ರಾಜಿ ಡಿಕ್ರಿ ಮೂಲಕ ಕೊಡಲಾಗಿದೆ ಅಂದರೆ ಸರಿ. ನಮ್ಮ ತಂದೆ-ತಾಯಿ ಮರಣ ದ ನಂತರ ಕಲಘಟಗಿ ಆಸ್ತಿಯನು್ನ ಹಾಗೂ ನಾನು ಹಾಗೂ ನನ್ನ ಅಣ್ಣ -ಸಮನಾಗಿ ತೆಗೆದುಕೊಳ್ಳಬೇಕೆಂದು ಡಿಕ್ರಿ ಪ್ರಕಾರ ತೆಗೆದುಕೊಂಡಿದ್ದೇವೆ ಅಂದರೆ ಸರಿ. ಕಲಘಟಗಿಯಲ್ಲಿರುವ ಆಸ್ತಿ ಹೊರತುಪಡಿಸಿ ಬೇರೆ ಯಾವುದೇ ಆಸ್ತಿಯನ್ನು ರಾಜಿ ಡಿಕ್ರಿ ಪ್ರಕಾರ ನಮ್ಮ ತಂದೆ-ತಾಯಿಗೆ ತೆಗೆದಿಲ್ಲ.

5. ದಾವಾ ಆಸ್ತಿ ಸ ನಂಃ 13. ದಾವಾ ಆಸ್ತಿಯನ್ನು 1983 ರಲ್ಲಿ ರೈತಾಪಿ ನಾತೆಯಿಂದ ನಮ್ಮ ಅಣ್ಣನಿಗೆ ಕೊಡಲಾಗಿದೆ ಅಂದರೆ ಸರಿಯಲ್ಲ. 1974 ರ ಪ್ರಕಾರ ವಾಟ್ನಿ ಪ್ರಕಾರ ಅವರವರ ಹೆಸರುಗಳನ್ನು ಉತಾರದಲ್ಲಿ ನಮೂದು ಮಾಡಿಕೊಂಡು ಬಂದಿದ್ದೇವೆ ಅಂದರೆ ಸರಿ. 1974 ರ ನಂತರ ಇಲ್ಲಿಯವರೆಗೆ ಯಾರೂ ಕೂಡಾ ರಾಜಿ ಡಿಕ್ರಿ ಯನ್ನು ಡಿಕ್ರಿ ಮಾಡಿಲ್ಲ ಅಂದರೆ ಸರಿಯಲ್ಲ. ಯಾವ ನ್ಯಾಯಾಲಯದಲ್ಲಿ ಮತ್ತು ಎಲ್ಲಿ ಮತ್ತು ಯಾರು ಪ್ರಶ್ನೆ ಮಾಡಿದ್ದಾರೆಂದು ಹೇಳಲಾಗುವುದಿಲ್ಲ.

**O.S. 65-24** **PW : 1**

ದಾವಾ ಆಸ್ತಿಯನ್ನು 1988 ರಲ್ಲಿ ಮಂಜೂರು ಮಾಡಿ ನಮ್ಮ ಅಣ್ಣನಿಗೆ ಫಾರ್ಮ ನಂಃ 11 ನ್ನು ಕೊಡಲಾಗಿದೆ ಅಂದರೆ ಸರಿಯಲ್ಲ. ನಮ್ಮ ತಂದೆ, ನಮ್ಮ ಅಣ್ಣನಿಗೆ ಜಿ ಪಿ ಎ ಬರೆದುಕೊಟ್ಟಿದ್ದರು ಅದರ ಪ್ರಕಾರ ನಮ್ಮ ತಂದೆಯ ಪರವಾಗಿ ಕೆಲಸ ಮಾಡಿಕೊಂಡು ಬಂದಿದ್ದಾರೆ ಅಂದರೆ ಸರಿಯಲ್ಲ. ನಮ್ಮ ತಾಯಿ ನಮ್ಮ ಮನೆಯಲ್ಲಿ ಮರಣ ಹೊಂದಿದ್ದಾರೆ. ನಮ್ಮ ತಂದೆ ನಮ್ಮ ಅಣ್ಣನ ಮನೆಯಲ್ಲಿ ಮರಣ ಹೊಂದಿದ್ದಾರೆ ಅಂದರೆ ಸರಿ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.